ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಧಾರವಾಡ ವೃತ್ತ, ಧಾರವಾಡ**

**ಅಧಿಸೂಚನೆ ಸಂಖ್ಯೆ: ಬಿ4/ಸಿಬ್ಬಂದಿ/ಅವೀ/ನೇನೇ/ಸಿಆರ್-39/2023-24**
**ದಿನಾಂಕ: 16-09-2023 ರಂತೆ**

**2023-24 ನೇ ಸಾಲಿನಲ್ಲಿ 07 (ಏಳು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನೇರ ನೇಮಕಾತಿ**

# ಪ್ರಕಟಣೆ

ಸರ್ಕಾರದ ಅಧಿಸೂಚನೆಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯಇಲಾಖಾಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಅರಣ್ಯ ವೀಕ್ಷಕ ವೃಂದಕ್ಕೆ ಸಂಬಂಧಿಸಿದಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆಯ್ಕೆ ಪ್ರಾಧಿಕಾರವಾಗಿರುತ್ತಾರೆ.

ಅದರನ್ವಯ, ಧಾರವಾಡ ವೃತ್ತಕ್ಕೆ ಸಂಬಂಧಿಸಿದಂತೆ ಅಧಿಸೂಚಿಸಲಾದ 07 ಅರಣ್ಯ ವೀಕ್ಷಕ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಈಗಾಗಲೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳನ್ವಯ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test]ಗಳಿಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗಿದೆ ಹಾಗೂ ಪ್ರತೀ ಪ್ರವರ್ಗದಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಕೊನೆಯ ಅಭ್ಯರ್ಥಿಯು ಗಳಿಸಿರುವ ಅಂಕಗಳ ಶೇಕಡವಾರು ಮಾಹಿತಿಯ ವಿವರವನ್ನು ಪ್ರಕಟಿಸಲಾಗಿದೆ.

ಈ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ **ಪೂರಕದಾಖಲಾತಿಗಳೊಂದಿಗೆ ಸ್ಪಷ್ಟ ರೀತಿಯಲ್ಲಿಆಕ್ಷೇಪಣೆಯನ್ನುವಿವರಿಸಿ ಇ-ಮೇಲ್ "cfdcdwd@yahoo.co.in"/ ಸ್ಪೀಡ್ ಪೋಸ್ಟ್/ ರಿಜಿಸ್ಟರ್ ಪೋಸ್ಟ್ ಮೂಲಕ ಈ ಕಛೇರಿಗೆ ದಿನಾಂಕ: 20-02-2024 ಸಂಜೆ 5.30 ಗಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿತ್ತು.**

ಅದರಂತೆ ಸ್ವೀಕೃತವಾಗಿರುವ ಆಕ್ಷೇಪಣೆಗಳ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ವಿವರಿಸಿ ಅಂತಿಮ 1:20 (ಹುದ್ದೆ:ಅಭ್ಯರ್ಥಿ) ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಟಿಸಲಾಗಿತ್ತು. ದಿನಾಂಕ: 29-02-2024 ರಂದು ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಂಡಾಗಣದಲ್ಲಿ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test] ಹಾಗೂ ಪ್ರಾಥಮಿಕ ಹಂತದ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಲಾಗಿತ್ತು. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡದಲ್ಲಿ ಮೇಲಿನ ಎಲ್ಲಾ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗಿತ್ತು.

ಪ್ರಯುಕ್ತ, ಧಾರವಾಡ ವೃತ್ತದ 07 ಅರಣ್ಯ ವೀಕ್ಷಕರ 1:1 ಹುದ್ದೆಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅನುಬಂಧ-1 ರಲ್ಲಿ ಪ್ರಕಟಿಸಲಾಗಿದ್ದು, ಸದರಿ ಆಯ್ಕೆ ಪಟ್ಟಿಯ ಬಗ್ಗೆ ಯಾವುದಾದರೂ ಆಕ್ಷೇಪಣೆಗಳಿದ್ದರೆ ಮೇಲಿನ ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಈ ಕಚೇರಿಗೆ ಇ-ಮೇಲ್ cfdcdwd@yahoo.co.in ಗೆ ದಿನಾಂಕ: 14-03-2024 ರ ಸಂಜೆ 05:30 ರೊಳಗಾಗಿ ಇ-ಮೇಲ್ ಮುಖಾಂತರ ಮಾತ್ರ ತಮ್ಮ ಆಕ್ಷೇಪಣೆಗಳನ್ನು ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿತ್ತು, ಅದರಂತೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಅನುಬಂಧ-1 ರಲ್ಲಿ ಪ್ರಕಟಿಸಲಾಗಿರುತ್ತದೆ. ಅನುಬಂಧ-2 ರಲ್ಲಿ ಅರಣ್ಯ ವೀಕ್ಷಕರ ಹುದ್ದೆಯ 1:1 ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಈ ಕುರಿತು ಆಯ್ಕೆ ಆದ ಅಭ್ಯರ್ಥಿಗಳಿಗೆ ಮುಂದಿನ ಸೂಚನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ https://aranya.gov.in/ ಪ್ರಕಟಿಸಲಾಗುವುದು.

ದಿನಾಂಕ: 15-03-2024.

15/3/24

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ
ಆಯ್ಕೆ ಪ್ರಾಧಿಕಾರ
ಧಾರವಾಡ ವೃತ್ತ, ಧಾರವಾಡ.

## ಅನುಬಂಧ-1

## ತಾತ್ಕಾಲಿಕ ಅರಣ್ಯ ವೀಕ್ಷಕರ ಆಯ್ಕೆ ಪಟ್ಟಿ ಕುರಿತು ಸ್ವೀಕೃತವಾದ ಆಕ್ಷೇಪಣೆಗಳಿಗೆ ಉತ್ತರ.

| ಕ್ರ.ಸಂ. | ಹೆಸರು | ಆಕ್ಷೇಪಣೆಯ ವಿವರ | ಆಕ್ಷೇಪಣೆಗಳ ಮೇಲೆ ಕೈಗೊಂಡ ಕ್ರಮದ ವಿವರ. |
|---|---|---|---|
| 1 | 2 | 3 | 4 |
| 1 | ಕು. ಸಾನಿಯಾ ಇಮಾಮಸಾಬ್ ಮಿರ್ಜಿ | ನಾನು ಅಭ್ಯರ್ಥಿ ಸಾನಿಯಾ ಇಮಾಮಸಾಬ್ ಮಿರ್ಜಿ ರವರು ಎಲ್ಲಾ ದೈಹಿಕ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ್ದೇನೆ ಹಾಗೂ ದೈಹಿಕ ಪರೀಕ್ಷೆಯಲ್ಲಿ ತೂಕದಲ್ಲಿ ಕಡಿಮೆಯಿದ್ದ 37 ಕೆ.ಜಿ. ಅಭ್ಯರ್ಥಿ ಕು. ಭೂಮಿಕಾ ಲಮಾಣಿ ಇವರನ್ನು ಸಾಮಾನ್ಯ ವರ್ಗದಲ್ಲಿ ಆಯ್ಕೆ ಮಾಡಿರುತ್ತೀರಿ ಆದ್ದರಿಂದ ನನಗೆ ದೈಹಿಕ ಪರೀಕ್ಷೆಯ ದಾಖಲೆಗಳನ್ನು ಪರಿಶೀಲಿಸಿ ತೋರಿಸಿ ಅರ್ಹ ಅಭ್ಯರ್ಥಿಯಾದ ನನ್ನನ್ನು ಆ ಹುದ್ದೆಗೆ ಆಯ್ಕೆ ಮಾಡಿ ನ್ಯಾಯ ಒದಗಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. | ಸದರಿಯವರ ಆಕ್ಷೇಪಣೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗಿ, ಸದರಿ ಸಮಿತಿಯು ಇಬ್ಬರು ಅಭ್ಯರ್ಥಿಗಳ ಸಮಕ್ಷಮ ವಾದಿ ಮತ್ತು ಪ್ರತಿವಾದಿಗಳನ್ನು ಕರೆಯಿಸಿ ಮತ್ತೊಮ್ಮೆ ತೂಕವನ್ನು ಪರಿಶೀಲಿಸಿ ಸದರಿ ಪ್ರಕರಣವನ್ನು ವಿಡಿಯೋ ಚಿತ್ರೀಕರಿಸಿ ನೋಡಲಾಗಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಧಾರವಾಡ ಇವರು ನೀಡಿರುವ ತೂಕಕ್ಕೂ ಮತ್ತು ನೈಜವಾಗಿ ಇರುವ ತೂಕಕ್ಕೆ ವ್ಯತ್ಯಾಸ ಕಂಡುಬಂದಿರುವುದರಿಂದ ಹಾಗೂ ಸದರಿ ಅಭ್ಯರ್ಥಿ ಕು. ಭೂಮಿಕಾ ಲಮಾಣಿ ಇವರ ತೂಕವು ನಿಗದಿಪಡಿಸಿದ ತೂಕಕ್ಕಿಂತ ಕಡಿಮೆ ಇರುವುದಾಗಿ ವರದಿ ಸಲ್ಲಿಸಿರುತ್ತಾರೆ. ಆದುದರಿಂದ ಸದರಿ ಅಭ್ಯರ್ಥಿಯನ್ನು ಕೈಬಿಟ್ಟು ನಿಯಮಾನುಸಾರ ಅರ್ಹರಿರುವ ಮುಂದಿನ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಯಿತು. |

15/3/24

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಧಾರವಾಡ ವೃತ್ತ, ಧಾರವಾಡ.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರರವರ ಕಛೇರಿ, ಧಾರವಾಡ ವೃತ್ತ, ಧಾರವಾಡ

ಅಧಿಸೂಚನೆ ಸಂಖ್ಯೆ: ಬಿ4/ಸಿಬ್ಬಂದಿ/ಅವೀ/ನೇನೇ/ಸಿಆರ್-39/2023-24. ದಿನಾಂಕ: 16-09-2023 ರಂತೆ

2023-24ನೇ ಸಾಲಿನಲ್ಲಿ 07 (ಏಳು) ಅರಣ್ಯ ವೀಕ್ಷಕ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನೇರ ನೇಮಕಾತಿ

ದಿನಾಂಕ: 29-02-2024 ರಂದು ನಡೆದ ದೈಹಿಕ ತಾಳ್ವಿಕೆ ಪರೀಕ್ಷೆಯ, ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ, ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ, ಹಾಗೂ ಮೂಲ ದಾಖಲೆಗಳ ಪರಿಶೀಲನೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಅಧಿಸೂಚನೆ ದಿನಾಂಕ: 16-09-2023 ರಲ್ಲಿ ಪ್ರಕಟಿಸಿರುವ ಹುದ್ದೆಗಳಂತೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

## ಅನುಬಂಧ-2

| Sl No | Registration id | Application ID | Candidate Name | Date Of Birth | Gender | Category claimed | Kannada | Rural | PH | Ex-military | sslc percentage | Selected category in provisional selection list | Remarks |
|---|---|---|---|---|---|---|---|---|---|---|---|---|---|
| 1 | 1165213 | 2606206 | VINODKUMAR CHIDANAND KOLLI | 21-07-2005 | MALE | 2A | Yes | Yes | No | No | 99.04 | 2A GM Others | |
| 2 | 1239723 | 2609069 | GURUNATH SURESH ALLAPUR | 04-02-2005 | MALE | 3B | Yes | No | No | No | 98.72 | 3B GM Others | |
| 3 | 1199703 | 2607393 | JAGADEESH KOPPAD | 01-07-2005 | MALE | 3B | Yes | No | No | No | 98.08 | 3B GM Others | |
| 4 | 1099561 | 2603316 | DAKSHIT RAVI RATHOD | 05-03-2005 | MALE | SC | Yes | Yes | No | No | 97.12 | SC SC Others | |
| 5 | 1112387 | 2603816 | SANJANA DAVAJAPPA KARABHARI | 20-04-2005 | FEMALE | SC | Yes | No | No | No | 95.36 | SC SC Others | |
| 6 | 1135253 | 2604945 | P PAVANKUMARA | 15-06-2005 | MALE | SC | Yes | Yes | No | No | 94.56 | SC SC Others | |
| 7 | 1232645 | 2608735 | BASAVARAJ MARUTI MUKANAVAR | 22-12-2004 | MALE | ST | Yes | Yes | No | No | 95.68 | ST ST Others | |

15/3/24

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಧಾರವಾಡ ವೃತ್ತ, ಧಾರವಾಡ.